ಕ್ರಿ. ಮಿಸ್. 346/2020 ಪಿ.ಡಬ್ಲ್ಯೂ:1 - ಶೃತಿ ಜಗದೀಶ ವಗಟಿ

ಸಾಕ್ಷಿಗೆ ದಿನಾಂಕಃ 22-08-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಎದುರುದಾರ ಪರ ಶ್ರೀ. ಪಿ. ಕೆ. ಉಡುಪಿ ವಕೀಲರಿಂದಃ**

1. ನಾನು ಮದುವೆಯಾದ ನಂತರ ನನ್ನ ಗಂಡನ ಜೊತೆ ಕೃಷ್ಣಪೂರ ಗ್ರಾಮ ದಲ್ಲಿ 3 ತಿಂಗಳು ವಾಸವಾಗಿದ್ದೆ. ಆ ಸಮಯದಲ್ಲಿ ನನ್ನ ಗಂಡ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದ ಎಂದರೆ ನಿಜ. ಎದುರುದಾರ ನನ್ನ ತಾಯಿಯ ತಮ್ಮ ಎಂದರೆ ನಿಜ. ನಾನು 3 ತಿಂಗಳ ನಂತರ ಎದುರುದಾರನನ್ನು ತೊರೆದು, ನನ್ನ ತವರುಮನೆಗೆ ಹೋಗಿದ್ದೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ನಾನು 3 ತಿಂಗಳು ಆದರೂ ಸಹ ನಾನು ನನ್ನ ಅಜ್ಜ ಮತ್ತು ಅಜ್ಜಿಯನ್ನು ನೋಡಿಕೊಂಡು, ಕೃಷ್ಣಾಪೂರದಲ್ಲಿಯೇ ವಾಸವಾಗಿದ್ದೆ ಎಂದು ಹೇಳುತ್ತಾರೆ. ನಾನು ಈಗ ನನ್ನ ತಂದೆ ತಾಯಿ ಜೊತೆ ವಾಸವಾಗಿದ್ದೇನೆ ಎಂದರೆ ಸರಿ ಅಲ್ಲ. ನಾನು ಆಗ ಮತ್ತು ಈಗ ಕೃಷ್ಣಾಪೂರದಲ್ಲಿ ವಾಸವಾಗಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಉದ್ದೇಶಪೂರ್ವಕವಾಗಿ ಕೃಷ್ಣಾಪೂರದಲ್ಲಿ ವಾಸವಾಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಾವು ಮತ್ತು ನನ್ನ ಮನೆಯವರು ಮದುವೆಯ ಸಮಯದಲ್ಲಿ ರೂ.30,000/- ವರೋಪಚಾರ ಹಾಗೂ ರೂ.35,000/- ಗೃಹ ಬಳಕೆಯ ವಸ್ತು ಹಾಗೂ ರೂ.10,000/- ಬಟ್ಟೆ ಹಾಗೂ 50 ಗ್ರಾಂ ಬಂಗಾರ ಹಾಗೂ ರೂ.2,00,000/- ಖರ್ಚು ಮಾಡಿ, ಮದುವೆಮಾಡಿಕೊಟ್ಟ ಬಗ್ಗೆ ದಾಖಲೆಗಳು ಇರುವುದಿಲ್ಲ. ಆದರೆ, ಆ ರೀತಿ ಖರ್ಚು ಮಾಡಿ , ಮದುವೆ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ ಯಾವುದೇ ವಸ್ತುಗಳನ್ನು ಕೊಡದೇ

ಇದ್ದರೂ ಸಹ ಕೊಟ್ಟಿದ್ದೇನೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿ ಅಲ್ಲ. ಎದುರುದಾರರು ರೋಣದ ಶಿವಪೇಟೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು, ವಾಸವಾಗಿದ್ದಾರೆ ಎಂದು ಹೇಳುತ್ತಾರೆ. ಆ ಮನೆ ಯಾರಿಗೆ ಸೇರಿದ್ದು, ಎಂದು ನನಗೆ ಗೊತ್ತಿಲ್ಲ. ರೋಣದಲ್ಲಿ ಎದುರುದಾರ ವಾಸವಾಗಿರುವ ಬಗ್ಗೆ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಆ ರೀತಿ ಉದ್ದೇಶಪೂರ್ವಕವಾಗಿ ಸುಳ್ಳು ಬರೆಸಿದ್ದೇನೆಂದರೆ ಸರಿ ಅಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ . ಎಫ್ .ಸಿ**
**ನ್ಯಾಯಾಧೀಶರು ರೋಣ .**